# ಸೆಣಬಿನ ಸೊಬಗು

## ಒಡವೆಯಿಂದ ಗೃಹಾಲಂಕಾರದವರೆಗೆ

**ಸೆಣಬಿನಿಂದ ಕಿವಿಯೋಲೆ, ಹ್ಯಾಂಗಿಂಗ್ಸ್, ಉಂಗುರ, ಸರದಿಂದ ಹಿಡಿದು ಆ್ಯಕ್ಸೆಸ್ಸರೀಸ್‌ಗಳಾದ ಬ್ಯಾಗ್, ಪರ್ಸ್, ಚಪ್ಪಲಿವರೆಗೆ ಏನೆಲ್ಲವನ್ನೂ ತಯಾರಿಸಿ ಧರಿಸಬಹುದು. ಅಷ್ಟೇ ಏಕೆ, ಒಳಾಂಗಣ ವಿನ್ಯಾಸಕ್ಕೆ ಅನುಕೂಲವಾದ ಹ್ಯಾಂಗಿಂಗ್ಸ್‌ಗಳನ್ನೂ ಮಾಡಬಹುದು. ಫ್ಯಾಷನ್‌ನಿಂದ ಇಂಟೀರಿಯರ್‌ವರೆಗೆ ಸೆಣಬು ಬಹೂಪಯೋಗಿ.**

■ **ಉಷಾ ಎಸ್. ಬೆಂಗಳೂರು**



ಫ್ಯಾಷನ್ ಜಗತ್ತೇ ಹಾಗೆ. ಒಂದು ರೀತಿಯಲ್ಲಿ ಇದು ಸರ್ವಾಂತರ್ಯಾಮಿ. ಜಗತ್ತಿನ ಎಲ್ಲ ವಸ್ತುಗಳೂ ಒಂದಲ್ಲ ಒಂದು ರೀತಿಯಲ್ಲಿ ಫ್ಯಾಷನ್‌ನೊಂದಿಗೆ ತಳಕು ಹಾಕಿಕೊಳ್ಳುತ್ತಲೇ ಇರುತ್ತವೆ. ಹತ್ತಿಯಿಂದ ತಯಾರಿಸಿದ ಉಡುಪು, ಒಡವೆಗಳು ಜನಪ್ರಿಯ. ಇದೀಗ ಸೆಣಬು ಕೂಡ ಫ್ಯಾಷನ್ ಪ್ರಪಂಚವನ್ನು ಆತುಕೊಂಡಿದೆ.

ಸೆಣಬಿನಿಂದ ಮಾಡಿದ ಆಭರಣಗಳು, ಆ್ಯಕ್ಸೆಸ್ಸರೀಸ್‌ಗಳು, ವಾಲ್ ಹ್ಯಾಂಗಿಂಗ್ಸ್‌ಗಳು ಫ್ಯಾಷನ್ ಟ್ರೆಂಡ್ ಆಗಿವೆ. ಜೊತೆಗೆ ಪಾದರಕ್ಷೆ, ಬ್ಯಾಗ್‌ಗಳು ಕೂಡ ಸೆಣಬಿನಿಂದ ತಯಾರಿಸಿದ್ದು ಸಖತ್ ಸದ್ದು ಮಾಡುತ್ತಿದೆ. ಸೆಣಬಿನ ಎಳೆಗಳನ್ನು ಅದರ ರೆಂಬೆ ಮತ್ತು ಅದರ ಹೊರಮೈನಿಂದ ತೆಗೆಯುತ್ತಾರೆ. ಈ ರೆಂಬೆಗಳನ್ನು ಒಟ್ಟುಗೂಡಿಸಿ ಅದನ್ನು ಸ್ವಲ್ಪ ಕಡಿಮೆ ಹರಿವಿರುವ ನೀರಿನಲ್ಲಿ ತೋಯಿಸುತ್ತಾರೆ. ಆನಂತರ ರೆಂಬೆಗಳ ಮೇಲು ಭಾಗವನ್ನು ಸುಲಿದು ಒಳಭಾದಲ್ಲಿನ ಸಸ್ಯದ ಎಳೆಗಳನ್ನು ಬೇರ್ಪಡಿಸುತ್ತಾರೆ. ಕಾಲಕ್ರಮೇಣ ಸೆಣಬಿನ ನಾರಿನ ಉಪಯೋಗ ವಿವಿಧ ರೀತಿಯದ್ದು.

ಕಾರು ಮತ್ತಿತರ ವಾಹನ ತಯಾರಿಕೆ, ಕಾಗದ, ಸಸ್ಯದ ಎಳೆಗಳಿಂದ ತಯಾರಾಗುವ ಫಿಲ್ಮ್ (ಛಾಯಾಚಿತ್ರ ತೆಗೆಯಲು ಬಳಸುವ ಕಾಗದ). ಹೆಣೆಯಲ್ಪಡುವ (ಮರದಂತಿರುವ ವಸ್ತು) ಮತ್ತು ಜಿಯೋ ಟೆಕ್ಸ್‌ಟೈಲ್ಸ್. ಇವಲ್ಲದೆ ಕುರ್ಚಿ ಮೇಜುಗಳಂತಹ ಸಾಧನಗಳನ್ನೂ ಇದರಿಂದ ತಯಾರಿಸಬಹುದಲ್ಲದು. ಹಾಸಿಗೆಗೆ ಬಳಸಲೂ ಇದು ಹೆಚ್ಚು ಸೂಕ್ತ. ಇದರಲ್ಲಿನ ವಸ್ತ್ರದ ಎಳೆಗಳು ವಿವಿಧ ರೀತಿಯಲ್ಲಿ ಬಳಕೆಯಾಗುತ್ತಿದೆ. ಇದನ್ನು ಗೃಹ ಶೃಂಗಾರಕ್ಕಾಗಿ ಬಳಸುವುದೂ ಒಂದು.

### ಚಂದದ ನೆಲಹಾಸು

ಮನೆಗಳಲ್ಲಿನ ಅಂದ ಚೆಂದ ಹೆಚ್ಚಿಸಲು ಬಳಸುವ ನೆಲಹಾಸು, ಕಿಟಕಿಯ ಪರದೆಗಳು, ಗೋಡೆಗಳ ತೂಗು ಪಟ್ಟಿಗಳು, ಕುರ್ಚಿಗಳ ಮೇಲ್ಭಾಗದ ಹೊದಿಕೆ.. ಹೀಗೆ ಅನೇಕ ಗೃಹಾಲಂಕಾರ ವಸ್ತುಗಳಾಗಿ ವಿವಿಧ ಬಣ್ಣಗಳು ಮತ್ತು ವಿವಿಧ ಆಕೃತಿಯ ಹೆಣಿಗೆಗಳಲ್ಲಿ ಬಳಸಲಾಗುತ್ತದೆ. ಇವೆಲ್ಲಕ್ಕೂ ಕಳಶವಿಟ್ಟಂತೆ ಇದು ಈಗಿನ ಯುವ ಜನಾಂಗದ ಅನುಕೂಲಕ್ಕೆ ತಕ್ಕಂತೆ ಸ್ತ್ರೀಯರ ಕೈಚೀಲಗಳು, ಸಣ್ಣ ಪರ್ಸುಗಳು, ಶಾಪಿಂಗ್ ಬ್ಯಾಗುಗಳೇ ಅಲ್ಲದೆ ಫ್ಯಾಷನ್ ಆಭರಣಗಳು ಮತ್ತು ಪಾದರಕ್ಷೆಗಳ ತಯಾರಿಕೆಯಲ್ಲೂ ಬಳಕೆಯಾಗುತ್ತದೆ. ಇಲ್ಲಿ ದೊರೆಯುವ ಅನೇಕ ವಿನ್ಯಾಸ ಮತ್ತು ಬಣ್ಣಗಳು ಮಹಳೆಯರನ್ನು ಸೆಣಬಿನ ವಸ್ತುಗಳ